**ದಿ.೦೫-೦೩-೨೦೨೨ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ೨ ಮತ್ತು ೪ ನೇ ಪ್ರತಿವಾದಿ ಪರ ಶ್ರೀ.ಕೆ.ಎ.ಆರ್ ವಕೀಲರಿಂದ.**

ನಾನು ಅಜ್ಜಂಪುರದಲ್ಲಿ ವಾಸವಾಗಿದ್ದು ನನ್ನ ಮನೆಯಿಂದ ೨ ನೇ ಪ್ರತಿವಾದಿಯ ಮನೆಗೆ ಸುಮಾರು ೧ ಕಿ.ಮೀ. ಅಂತರವಿದೆ. ೨ ಮತ್ತು ೪ ನೇ ಪ್ರತಿವಾದಿಯು ನನ್ನ ಸಂಬಂಧಿಕರಲ್ಲ ಹಾಗೂ ಸ್ನೇಹಿತರಲ್ಲ. ೨ ಮತ್ತು ೪ ನೇ ಪ್ರತಿವಾದಿಯ ಜಮೀನು ಹಾಗೂ ನಮ್ಮ ಜಮೀನು ಅಕ್ಕ ಪಕ್ಕ ಇರುವುದಿಲ್ಲ. ಸಿ.ಆರ್. ಹನುಮಂತಪ್ಪ ನನ್ನ ದೊಡ್ಡಪ್ಪ ಆಗಬೇಕು ಎಂದು ತೋರಿಸಲು ನನ್ನ ಬಳಿ ದಾಖಲಾತಿಗಳಿವೆ. ನನ್ನ ತಂದೆಯ ಹೆಸರು ಗಂಗಾಧರಪ್ಪ ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ದಾಖಲಾತಿಗಳಲ್ಲಿ ನನ್ನ ತಂದೆಯ ಹೆಸರು ಅಥವಾ ನನ್ನ ಹೆಸರಾಗಲಿ ಇಲ್ಲ ಎಂದರೆ

ಸರಿ. ಸಾಕ್ಷಿ ಮುಂದುವರೆದು ಅದಕ್ಕೆ ನಾವು ನ್ಯಾಯಾಲಯಕ್ಕೆ ಬಂದಿರುವುದು ಎಂದು ನುಡಿಯುತ್ತಾರೆ. ನನ್ನ ಅಜ್ಜ ರಂಗಣ್ಣ ಅಲಿಯಾಸ್ ಶಿವನಿ ರಂಗಣ್ಣ ಎಂದು ತೋರಿಸಲು ನನ್ನ ದಾಖಲಾತಿಗಳಿವೆ. ನನ್ನ ತಂದೆ ಜೀವಾಂತವಾಗಿದ್ದಾಗ ಎಲ್ಲಾ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು ಅವರು ಮರಣ ಹೊಂದಿದ ನಂತರ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಾನು ಗವಿಯಪ್ಪನನ್ನು ನೋಡಿರುತ್ತೇನೆ. ಗವಿಯಪ್ಪ ಅವರ ತಂದೆ ಶಿವನಿ ರಂಗಣ್ಣನನ್ನು ನಾನು ನೋಡಿರುವುದಿಲ್ಲ. ದಿ.೦೩/೦೩/೧೯೫೫ ರ ದಾಖಲಾತಿ ಅಂದರೆ ನಿಪಿ-೧ ಅನ್ನು ಹಾಜರುಪಡಿಸಿದ್ದು ಅದನ್ನು ನನ್ನ ತಂದೆ ಹಾಜರುಪಡಿಸಿರುತ್ತಾರೆ ನನಗೆ ಓದಲು ಬರೆಯಲು ಬರದೇ ಇದ್ದ ಕಾರಣ ಅದರಲ್ಲಿ ಏನು ಬೆರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-೧ ಅನ್ನು ನಾನು ಬೇರೆಯವರಿಂದ ಓದಿ ತಿಳಿದುಕೊಂಡಿರುತ್ತೇನೆ. ನಿಪಿ-೧ ಕ್ಕೆ ಗವಿಯಪ್ಪ ಸಹಿ ಮಾಡಿರುವುದಿಲ್ಲ. ನಿಪಿ-೧ ರಲ್ಲಿ ಹನುಮಂತಪ್ಪ ಸಹಿ ಮಾಡಿದ್ದಾರ ಎಂದು ನನಗೆ ಗೊತ್ತಿಲ್ಲ.

ದಾವ ಆಸ್ತಿಗಳು ನಾನು ವಾಸಮಾಡುವ ಊರದ ಅಜ್ಜಂಪುರದಲ್ಲಿ ಇದೆ ಎಂದರೆ ಸರಿ. ನಾನು ದಾವ ಆಸ್ತಿಗಳನ್ನು ಮೊದಲಿನಿಂದಲೂ ನೋಡುತ್ತಾ ಬಂದಿರುತ್ತೇನೆ. ನನಗೆ ತಿಳುವಳಿಕೆ ಬಂದಾಗಲಿಂದಲೂ ದಾವ ಆಸ್ತಿಗಳನ್ನು ಸಿದ್ದರಾಮಪ್ಪ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಅದನ್ನು ನನ್ನ ಅಜ್ಜ ನೋಡಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜ ಸ್ವಾಧೀನದಲ್ಲಿರುವ ಬಗ್ಗೆ ಕಂದಾಯ ಕಟ್ಟಿರುವ ರಶೀದಿಗಳನ್ನು **ಹುಡುಕಬೇಕು.** ನನ್ನ ಅಜ್ಜ ಅವರ ಹೆಸರಿನಲ್ಲಿ ಪಹಣಿ ಇರುವ ಬಗ್ಗೆ ನಾನು ಹುಡುಕಬೇಕು. ನಿಪಿ-೧೪ ರಲ್ಲಿ ತೋರಿಸಿರುವ ಸಿದ್ದರಾಮಯ್ಯ ಬಿನ್ ತಿಮ್ಮಯ್ಯ ೨ ನೇ ಹಾಗೂ ೪ ನೇ ಪ್ರತಿವಾದಿಯ ತಂದೆ. ಸಿದ್ದರಾಮಯ್ಯ

ಅವರ ಹೆಸರು ಪಹಣಿಗಳಲ್ಲಿ ಮೋಸ ಮಾಡಿ ನಮೂದು ಮಾಡಿಸಿಕೊಂಡಿರುತ್ತಾರೆ. ಸಿದ್ದರಾಮಯ್ಯ ಅವರ ಹೆಸರಿನಲ್ಲಿ ಪಹಣಿಗಳು ಬರುತ್ತಿದೆ ಎಂದು ನನಗೆ ಸುಮಾರು ೧೫ ವರ್ಷಗಳ ಹಿಂದೆ ತಿಳಿದಿರುತ್ತದೆ.

ಅಜ್ಜಂಪುರ ಗ್ರಾಮದಲ್ಲಿ ಸರ್ವೇ ನಂ.೯೫/೨, ೧೬೦ ಹಾಗೂ ೯೪/೫ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಹೆಸರಿನಲ್ಲಿ ಇರುತ್ತದೆ. ಸರ್ವೇ ನಂ.೯೫/೨ ರಲ್ಲಿ ೨ ಎಕರೆ, ಸರ್ವೇ ನಂ.೧೬೦ ರಲ್ಲಿ ೩ ಎಕರೆ ೨೭ ಗುಂಟೆ ಹಾಗೂ ಸರ್ವೇ ನಂ.೯೪/೫ ರಲ್ಲಿ ೧ ಎಕರೆ ೨೪ ಗುಂಟೆ ನಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿ ಅದನ್ನು ನಮ್ಮ ಅಜ್ಜ ಮಾಡಿರಬಹುದು ಆದರೆ ದಾವ ಆಸ್ತಿಗಳಲ್ಲಿ ನಮ್ಮ ತಂದೆಯ ಹೆಸರು ಇಲ್ಲ ಎಂದು ನುಡಿಯುತ್ತಾರೆ. ೧೯೯೫ ರಲ್ಲಿ ಮೇಲೆ ಹೇಳಿರುವ ೩ ಆಸ್ತಿಗಳ ಖಾತೆ ನನ್ನ ತಂದೆಯ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ. ದಾವ ಆಸ್ತಿಗಳಲ್ಲಿ ನಿಮ್ಮ ಕುಟುಂಬದವರ ಹೆಸರು ಏಕೆ ಇಲ್ಲ ಎಂದು ಪರೀಶೀಲಿಸಿದ್ದೀರಾ ಎಂದರೆ ಸಾಕ್ಷಿ ಪ್ರತಿವಾದಿಯವರು ನಮ್ಮ ಆಸ್ತಿಗೆ ಬಂದು ದೌರ್ಜನ್ಯ ಮಾಡಿ ಅದು ಅವರ ಆಸ್ತಿ ಎಂದು ಹೇಳಿದ ನಂತರ ನನ್ನ ತಂದೆ ಈ ದಾವೆಯನ್ನು ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ೨ ನೇ ಪ್ರತಿವಾದಿಯ ತಂದೆ ರಾಮಚಂದ್ರಪ್ಪ ಹಾಗೂ ೪ ನೇ ಪ್ರತಿವಾದಿಯ ತಂದೆ ಸಿದ್ದರಾಮಪ್ಪ ಅವರನ್ನು ನೋಡಿದ್ದೀರಾ ಎಂದರೆ ಸಾಕ್ಷಿ ರಾಮಚಂದ್ರಪ್ಪ ಅವರನ್ನು ನೋಡಿರುತ್ತೇನೆ ಆದರೆ ಸಿದ್ದರಾಮಪ್ಪ ಅವರನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ನಿಪಿ-೧ ರಲ್ಲಿ ತೋರಿಸಲಾದ ಹನುಮಣ್ಣ ಅವರು ಸರ್ವೇ ನಂ.೨೦೯ ರಲ್ಲಿರುವ ಆಸ್ತಿಗಳನ್ನು ಅನುಭವಿಸುತ್ತಾ ಬರುತ್ತಿದ್ದರು ಎಂದರೆ ಸರಿ.

ಸದರಿ ಹನುಮಣ್ಣ ಅವರು ಸರ್ವೇ ನಂ.೨೦೯ ರಲ್ಲಿರುವ ಆಸ್ತಿಗಳನ್ನು ಮಹಾಲಿಂಗಪ್ಪ ಬಿನ್ ರುದ್ರಪ್ಪ ಅವರಿಗೆ ೧೯೫೮-೫೯ ರಲ್ಲಿ ಅಡಮಾನ ಮಾಡಿದ್ದರು ಎಂದರೆ ಸಾಕ್ಷಿ ನಮಗೆ ಕೇಳದೇ ಮಾಡಿದ್ದಾರೆ ಎಂದು ನುಡಿಯುತ್ತಾರೆ. ೧೯೬೧-೬೨ ರಲ್ಲಿ ಹನುಮಣ್ಣ ಸರ್ವೇ ನಂ.೨೦೯ ಆಸ್ತಿಯನ್ನು ಮಹಾಲಿಂಗ ಅವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನಮಗೆ ಕೇಳದೆ ಹೇಗೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ೧೯೬೧-೬೨ ರ ಕ್ರಯ ಪತ್ರವನ್ನು ಪ್ರಶ್ನಿಸಿ ಈ ದಾವೆಯನ್ನು ನನ್ನ ತಂದೆ ಸಲ್ಲಿಸಿರುತ್ತಾರೆ. ಸದರಿ ಮಹಾಲಿಂಗ ಅವರು ದಿ.೨೯/೦೩/೧೯೬೩ ರಂದು ೪ ನೇ ಪ್ರತಿವಾದಿಯ ತಂದೆಯಾದ ಸಿದ್ದರಾಮಯ್ಯ ಅವರಿಗೆ ಸದರಿ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನಮ್ಮನ್ನು ಕೇಳದೇ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ೧೯೬೩ ರಿಂದ ಸಿದ್ದರಾಮಯ್ಯ ಸದರಿ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನನ್ನ ಅಜ್ಜ ಸ್ವಾಧೀನಲ್ಲಿದ್ದರು ಎಂದು ನುಡಿಯುತ್ತಾರೆ. ದಿ.೧೭/೦೧/೧೯೮೦ ರಲ್ಲಿ ಸಿದ್ದರಾಮಯ್ಯ ಅವರ ಮಕ್ಕಳು ಸದರಿ ಆಸ್ತಿಯನ್ನು ವಿಭಜನೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನಮಗೆ ಗೊತ್ತಾಗದಂತೆ ಒಳದೊಂಳಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೇ ನಂ.೨೦೯ ರ ೨೦ ಗುಂಟೆ ಜಮೀನಿನಲ್ಲಿ ೪ ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ನಮಗೆ ಗೊತ್ತಾಗದಂತೆ ಒಳದೊಂಳಗೆ ಮಾಡಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ಅದೇ ರೀತಿ ಎ.ಕೃಷ್ಣಮೂರ್ತಿ ೨೯ ಗುಂಟೆ ಮತ್ತು ೨ ನೇ ಪ್ರತಿವಾದಿಯ ತಂದೆ ರಾಮಚಂದ್ರಪ್ಪ ೨೦ ಗುಂಟೆ

ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ನಮಗೆ ಗೊತ್ತಾಗದಂತೆ ಒಳದೊಂಳಗೆ ಮಾಡಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ.

೨ ನೇ ಪ್ರತಿವಾದಿಯು ತನಗೆ ಬಂದ ಪಾಲನ್ನು ಭೂ ಪರಿವರ್ತನೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ನಮಗೆ ಗೊತ್ತಾಗದಂತೆ ಒಳದೊಂಳಗೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ೨ ನೇ ಪ್ರತಿವಾದಿಯು ತನಗೆ ಬಂದ ಪಾಲಿಗೆ ಬಂದ ೨೦ ಗುಂಟೆ ಆಸ್ತಿಯಲ್ಲಿ ಸೈಟ್ ಗಳನ್ನು ಮಾಡಿದ್ದಾರೆ ಎಂದರೆ ಸಾಕ್ಷಿ ನಮಗೆ ಗೊತ್ತಾಗದಂತೆ ಒಳದೊಂಳಗೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ೨೦ ಗುಂಟೆ ಜಾಗದಲ್ಲಿ ೧೯೯೭ ರಿಂದ ಸೈಟ್ ಗಳನ್ನು ಮಾಡಲಾಗಿದೆ ಎಂದರೆ ಸರಿ. ೨ ನೇ ಪ್ರತಿವಾದಿಯ ತಾಯಿಯ ಹೆಸರು ಕಮಲಮ್ಮ ತಮ್ಮನ ಹೆಸರು ಲಿಂಗರಾಜು ಎಂದರೆ ನನಗೆ ಗೊತ್ತಿಲ್ಲ. ಸದರಿ ೨೦ ಗುಂಟೆ ಜಮೀನಿನಲ್ಲಿ ಎಷ್ಟು ಸೈಟ್ ಮಾಡಲಾಗಿದೆ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಹನುಮಂತಪ್ಪ ನನ್ನ ದೊಡ್ಡ ಅಜ್ಜ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ನಮಗೂ ಹಾಗೂ ಶಿವನಿ ರಂಗಣ್ಣನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನಗೂ ಹಾಗೂ ಮೇಲೆ ಹೇಳಿರುವ ವ್ಯಕ್ತಿಗಳಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ೨ ನೇ ಹಾಗೂ ೪ ನೇ ಪ್ರತಿವಾದಿಯ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಗಳು ಅಜ್ಜಂಪುರದ ಊರಿನ ಪಕ್ಕ ಇರುವ ಆಸ್ತಿ ಎಂದರೆ ಸರಿ. ಅದು ಬೆಲೆಬಾಳುವ ಆಸ್ತಿ ಆದ ಕಾರಣ ಅದನ್ನು ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ೨ ನೇ ಹಾಗು ೪ ನೇ ಪ್ರತಿವಾದಿಯರ ಮತ್ತು ಅವರ ಪೂರ್ವಿಕರಿಗೆ ಸೇರಿದ ಆಸ್ತಿಯನ್ನು ನಾನು ನಮ್ಮ ಆಸ್ತಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಗಳು ೨ ನೇ ಹಾಗು ೪ ನೇ ಪ್ರತಿವಾದಿಯ ಮತ್ತು ಅವರ ಪೂರ್ವಿಕರ ಸ್ವಾಧೀನ ಹಾಗೂ ಮಾಲೀಕತ್ವದಲ್ಲಿ ೧೯೬೩ ಯಿಂದ ಇದೆ ಎಂದರೆ ಸರಿಯಲ್ಲ. ದಾವ ಆಸ್ತಿಗಳಿಗೂ ಹಾಗೂ ನಮಗೂ ಯಾವುದೇ ಸಂಬಂಧ ಇಲ್ಲದಿದ್ದರೂ ನಾನು ಸುಳ್ಳು ಕೇಸನ್ನು ಹಾಕಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ** ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.